# ಸಿಂಗಾಪುರ್ ಚೆರ್ರಿ - ಗಸಗಸೆ ಮರ



ಗಸಗಸೆ ಮರ ಸುಮಾರು 12 ಮೀಟರ್ ನಷ್ಟು ಎತ್ತರ ಬೆಳೆಯುವ ಒಂದು ಸಣ್ಣ ಗಾತ್ರದ ಮರವಾಗಿದೆ. ಇದರ ಕೊಂಬೆಗಳು ದೊಡ್ಡ ಛತ್ರಿಗಳಂತೆ ಹರಡಿಕೊಂಡು ಬೆಳೆಯುತ್ತವೆ! ಅತಿ ಕಡಿಮೆ ಸಮಯದಲ್ಲಿ ಬೆಳೆದು ದೊಡ್ಡದಾಗುವ ಈ ಮರ ಕಠಿಣ ಸ್ಥಿತಿಯ ಪರಿಸರದಲ್ಲಿ, ಅತಿ ಕಡಿಮೆ ನೀರಿನಲ್ಲೂ ಬೆಳೆಯುತ್ತದೆ.



## ಎಲೆಗಳು

ಗಸಗಸೆ ಮರದ ಎಲೆಗಳು, ಮೊಟ್ಟೆಯ ಆಕಾರವಿದ್ದು ಅದರ ತುದಿ ಚೂಪಾಗಿರುತ್ತದೆ. ಎಲೆಯ ಮೇಲ್ಮುಖ ಭಾಗ, ರೋಮಗಳಿಂದ ಆವರಿಸಿರುತ್ತದೆ. ಸಾಮಾನ್ಯವಾಗಿ ಈ ಎಲೆಗಳ ಮೇಲೆ ಬಣ್ಣ ಬಣ್ಣದ ಎರಡು ಪಟ್ಟೆಯ ಜಿಗಿಯುವ ಜೇಡ ಸೇರಿದಂತೆ, ಅನೇಕ ಹುಳುಗಳು ಕಂಡುಬರುತ್ತವೆ.

ಈ ಎಲೆಗಳನ್ನು ಒಮ್ಮೆ ಮುಟ್ಟಿ ನೋಡಿ, ಈ ಎಲೆಗಳ ಮೇಲೆ ನೀರಿನ ಹನಿಗಳು ಬಿದ್ದರೆ ಏನಾಗಬಹುದು? ಹನಿಗಳು ಅಲ್ಲಿಯೇ ನಿಲ್ಲುತ್ತವೆಯೇ ಅಥವಾ ಜಾರಿ ಬೀಳುತ್ತವೆಯೇ?



## ಹೂವುಗಳು

ಗಸಗಸೆ ಮರ ಸಣ್ಣದಾದ, ಬಿಳಿ ಬಣ್ಣದ ಹೂಗಳನ್ನು ಬಿಡುತ್ತದೆ. ನೀವು ಈ ಹೂವಿನ ದಳಗಳು ಎಷ್ಟಿವೆಯೆಂದು ಎಣಿಸಿ ನೋಡಬಹುದೇ? ಸಾಮಾನ್ಯವಾಗಿ ಈ ಹೂವುಗಳ ಹತ್ತಿರ ಜೇನುನೊಣ, ಚಿಟ್ಟೆಗಳು ಕಂಡುಬರುತ್ತವೆ. ಅವುಗಳಲ್ಲಿ ಕುಬ್ಜ ಜೇನುನೊಣವೂ ಒಂದು; ಇದೊಂದು ಸಣ್ಣ ಜಾತಿಯ ಜೇನುಹುಳುವಾಗಿದ್ದು, ಪರಾಗಸ್ಪರ್ಶಕ್ಕೆ ಇದು ಮುಖ್ಯವಾಗಿದೆ.



## ಹಣ್ಣುಗಳು

ಗಸಗಸೆ ಮರದ ಹಣ್ಣುಗಳು ಚಿಕ್ಕದಾಗಿ, ದುಂಡಗಿರುತ್ತವೆ. ಕಾಯಿಗಳು ಹಸಿರಾಗಿದ್ದು, ಮಾಗಿದಾಗ ಕೆಂಪು ಬಣ್ಣಕ್ಕೆ ತಿರುಗುತ್ತವೆ. ಮಾಗಿದ ಕೆಂಪು ಹಣ್ಣಿಗೆ ಸಿಹಿಯಾದ ವಾಸನೆ ಇದ್ದು, ಹಣ್ಣಿನ ಒಳಗೆ ಹಲವಾರು ಪುಟ್ಟ-ಪುಟ್ಟ ಹಳದಿ ಬೀಜಗಳಿರುತ್ತವೆ. ಸಾಮಾನ್ಯವಾಗಿ ಹಗಲು ಹೊತ್ತಿನಲ್ಲಿ ಕೆಮ್ಮೀಸೆ ಪಿಕಳಾರ ಮತ್ತು ಬದನಿಕೆ ಹಕ್ಕಿಗಳು ಈ ಹಣ್ಣುಗಳನ್ನು ತಿನ್ನಲು ಬರುತ್ತವೆ. ರಾತ್ರಿಯ ವೇಳೆ ಈ ಮರದ ಸುತ್ತಲೂ ಬಾವಲಿಗಳು ಕೀರಲು ಧ್ವನಿಯಲ್ಲಿ ಕಿರುಚುತ್ತಾ ಹಾರಾಡುವುದನ್ನು ಕಾಣಬಹುದು, ಏಕೆಂದರೆ ಬಾವುಲಿಗಳಿಗೂ ಈ ಹಣ್ಣುಗಳು ಇಷ್ಟ!



ಎಂದಾದರೂ ನೀವು ಗಸಗಸೆ ಮರದ ಹಣ್ಣುಗಳನ್ನು ತಿಂದಿದ್ದೀರಾ? ಅದರ ರುಚಿ ಹೇಗಿತ್ತು?ಅದು ಬೇರೆ ಯಾವ ತಿನಿಸಿನ ರುಚಿಯನ್ನು ನೆನಪಿಸುತ್ತದೆ?







## ತೊಗಟೆ

ಗಸಗಸೆ ಮರದ ತೊಗಟೆಯ ಬಣ್ಣ ತಿಳಿ ಕಂದು ಅಥವಾ ಕಂದು-ಬೂದು ಮಿಶ್ರಿತ ಬಣ್ಣವಾಗಿರುತ್ತದೆ, ಎಳೆಯ ಮರಗಳ ತೊಗಟೆ ನಯವಾಗಿದ್ದು, ಬೆಳೆಯುತ್ತ ತೊಗಟೆ ಒರಟಾಗಿ, ಚಡಿಗಳು ಮೂಡುತ್ತವೆ. ಈ ಒರಟು ಮೇಲ್ಮೈನ ತೊಗಟೆ, ಬಂಗಾರದ ಬೆನ್ನಿನ ಇರುವೆ ಮತ್ತು ಇತರ ಜಾತಿಯ ಇರುವೆಗಳಿಗೆ, ಆಹಾರ ಹುಡುಕುತ್ತ ಅತ್ತಿತ್ತ ಓಡಾಡಲು ಸುಗಮವಾದ ಹಾದಿಯನ್ನು ಮಾಡಿಕೊಡುತ್ತವೆ.

ಮರದ ತೊಗಟೆಯನ್ನು ಸೂಕ್ಷ್ಮವಾಗಿ ಗಮನಿಸಿ, ಬೇರೆ ಯಾವ ಕೀಟಗಳು ಹಾಗೂ ಜೇಡಗಳು ಮರದ ಕಾಂಡದಲ್ಲಿ ಅಡಗಿಕೊಂಡಿವೆ?



ಚಿತ್ರಕಲೆ : ಲಬೊನಿ ರೊಯ್

ಈ ಉತ್ಪನ್ನವು ನೇಚರ್ ಕ್ಲಾಸ್ರೂಮ್ಸ್ ಸೇರಿದೆ
CC BY SA 4.0